ಇನ್ನೂ ಮೂರ್ನಾಲ್ಕು ದಿನ ಎರ್ನಾಕುಲಂನಲ್ಲೇ ಇರಬೇಕಾಗುತ್ತದೆ. ನಂತರ ನಾನೂ ದೆಹಲಿಗೆ ಬರುತ್ತೇನೆ' ಎಂದಿದ್ದರು ನನ್ನ ಕಡೆ ನೋಡಿ ಕೆ.ಎಮ್. ನಯ್ಯಾರ್. 'ಓಕೆ, ರಾತ್ರಿ ರಾಘವರೆಡ್ಡಿ ಫೋನ್ ಮಾಡಿದ್ದರು. ಆರೋಗ್ಯ ಸಮಸ್ಯೆ ಕೂಡಾ ಸ್ವಲ್ಪ ಇದೆಯೆಂದು ಹೇಳಿದ್ದರು. ಒಂದೆರಡು ದಿನ ಆಗ್ರಾ, ಮಥುರಾ ಸುತ್ತಿಸಿಕೊಂಡು ಬರ್ತೀನಿ' ಎಂದಿದ್ದೆ. 'ಪಾಪ, ರಾಘವರೆಡ್ಡಿ ತುಂಬಾ ಒಳ್ಳೆಯ ಮನುಷ್ಯ. ಎದೆಯಲ್ಲಿ ಏನೂ ಬಚ್ಚಿಟ್ಟುಕೊಳ್ಳೋದಿಲ್ಲ ಮನುಷ್ಯ. ಆದರೆ ಸ್ವಲ್ಪ ಆತುರದ ಸ್ವಭಾವ ಅಷ್ಟೆ'. ರಾಘವರೆಡ್ಡಿಯ ಬಗ್ಗೆ ಕೆ.ಎಮ್. ನಯ್ಯಾರ್ ಹೇಳಿದ್ದು ಸರಿಯಾಗಿತ್ತು. ಅಷ್ಟರಲ್ಲಿ ಕೆ.ಎಮ್. ನಯ್ಯಾರರ ಮೊಬೈಲ್ ರಿಂಗಾಗಿತ್ತು. 'ಓಹ್ , ಸುಧೀಂದ್ರಣ್ಣ' ಎಂದು 'ಹಲೋ' ಎಂದಿದ್ದರು. ಹತ್ತು ನಿಮಿಷ ಆ ಕಡೆಯಿಂದ ಸುಧೀಂದ್ರ ನಯ್ಯಾರರೇ ಮಾತನಾಡಿದ್ದರು. ಈ ಕಡೆಯಿಂದ ಕೆ.ಎಮ್. ನಯ್ಯಾರ್ 'ಆಂ' 'ಊಂ' ಎಂದಷ್ಟೇ ಉದ್ಗಾರ ತೆಗೆಯುತ್ತಿದ್ದರು. ಮಾತನಾಡುವುದು ನಿಂತ ಮೇಲೆ ಕೆ.ಎಮ್. ನನ್ನ ಕಡೆ ನೋಡಿ, 'ಅಣ್ಣ ಸುಧೀಂದ್ರ ನಯ್ಯಾರ್ ತುಂಬಾ ಅಪ್ಸೆಟ್ ಆಗಿದ್ದಾರೆ. ನೆಲ್ಸನ್ ಸಾವು ತುಂಬಾ ಚರ್ಚೆಯ ವಿಷಯವಾಗಿದೆಯಂತೆ. ಕೆಲವರು ಅಣ್ಣ ಸುಧೀಂದ್ರ ನಯ್ಯಾರ್ ಕಡೆ ಬೆರಳು ತೋರಿಸುತ್ತಿದ್ದಾರಂತೆ. ಆದರೆ ಅಚ್ಯುತನ್ ನಂಬಿಯಾರ್ ಪ್ರವಾಹಕ್ಕೆ ಬಲಿಯಾಗಿರುವುದಂತೂ ಅಣ್ಣನಿಗೆ ತುಂಬಾ ಖುಷಿಯಾದಂತೆ ಕಾಣುತ್ತಿದೆ' ತೀರಾ ವಿವರವಾಗಿ ಹೇಳದೆ ಸಂಕ್ಷಿಪ್ತವಾಗಿ ಹೇಳಿದ್ದರು ನಯ್ಯಾರ್. ರಾತ್ರಿ ಫೋನ್ ಮಾಡಿದಾಗ ಕಾಕಿಗಡ್ಡ ರಾಘವರೆಡ್ಡಿ ಸುಧೀಂದ್ರ ನಯ್ಯಾರ್ ಬಗ್ಗೆ ಒಂದು ರೀತಿಯ ರಹಸ್ಯವಾಗಿ ಮಾತನಾಡಿದ್ದು ನೆನಪಾಗಿತ್ತು.

ನಾಲ್ಕು ಪ್ರವಾಹ ಪೀಡಿತ ನಿರಾಶ್ರಿತರ ಶಿಬಿರಗಳನ್ನು ನೋಡಿಕೊಂಡು ನಾವು ಎರ್ನಾಕುಲಂ ತಲುಪಿದಾಗ ಸಮಯ ಏಳು ಗಂಟೆಯಾಗಿತ್ತು. ಫ್ರೆಶ್ ಆಗಿ ಎರಡೆರಡು ಗ್ಲಾಸ್ ಬಿಯರ್‌ನೊಂದಿಗೆ ಅನ್ನ ಮತ್ತು ನುಗ್ಗೆಕಾಯಿ ಸಾಂಬಾರಿನೊಂದಿಗೆ ಊಟ ಮುಗಿಸಿದ್ದೆವು. ಕೆ.ಎಮ್. ನಯ್ಯಾರರಿಗೆ ತುಂಬಾ ಫೋನ್ ಬರುತ್ತಿದ್ದವು. ಕೆಲವರೊಂದಿಗೆ ಒಂದೆರಡು ನಿಮಿಷ ಮಾತನಾಡಿದರೆ ಇನ್ನೂ ಕೆಲವರೊಂದಿಗೆ ಬಹಳ ಹೊತ್ತು ಮಾತನಾಡುತ್ತಿದ್ದರು. ಕೆಲವು ಕರೆಗಳಿಗೆ ಭಗವಾನ್ ಕುಟ್ಟಿಯೇ ಉತ್ತರ ಕೊಡುತ್ತಿದ್ದ. ಒಂಬತ್ತೂವರೆ ಗಂಟೆಗೆಲ್ಲಾ ಮಲಗಲು ನನ್ನ ಕೊಠಡಿಗೆ ತೆರಳಿದ್ದೆ. ಭಗವಾನ್ ಕುಟ್ಟಿ ನನ್ನನ್ನು ರಾತ್ರಿ ಒಂದೂವರೆ ಗಂಟೆಗೆ ಎಬ್ಬಿಸುತ್ತೇನೆಂದು ಅಲಾರಾಂ ಇಟ್ಟಿದ್ದ.

ನಾನು ನಾಳೆ ದಿಲ್ಲಿಗೆ ಬರುತ್ತಿರುವುದರ ಬಗ್ಗೆ ರಾಘವರೆಡ್ಡಿಗೆ ಫೋನ್ ಮಾಡಿ ತಿಳಿಸಿದ್ದೆ. ಟ್ಯಾಕ್ಸಿ ಮಾಡಿಕೊಂಡು ಆಂಧ್ರ ಭವನಕ್ಕೆ ಬರಲು ಹೇಳಿದ್ದ ಆತ. ಸರಿಯಾಗಿ ಮಧ್ಯರಾತ್ರಿ ಒಂದು ಗಂಟೆಗೆ ನನ್ನ ಫೋನ್ ಮೊಳಗಿತ್ತು. ಗುಹೆಯೊಂದರ ಗರ್ಭದಾಳದಿಂದ ಯಾರೋ ಕೂಗಿದಂತಾಗಿ ಎಚ್ಚರವಾಗಿತ್ತು ನನಗೆ. ಬಾಗಿಲು ತಟ್ಟಿದ ಸದ್ದಾಗಿ ಬಾಗಿಲು ತೆರೆದಿದ್ದೆ. ಫ್ಲಾಸ್ಕ್ ಹಿಡಿದು ನಿಂತಿದ್ದ ಭಗವಾನ್ ಕುಟ್ಟಿ. ಗ್ಲಾಸಿಗೆ ಬಿಸಿ ಬಿಸಿ ಚಹಾವನ್ನು ಬಗ್ಗಿಸಿಕೊಟ್ಟು 'ಟೀ ಕುಡಿದು ಮುಖ ತೊಳೆದು ರೆಡಿಯಾಗಿ ಸಾಹೇಬ್ರೆ, ನೀವು ಸ್ನಾನವನ್ನು ದಿಲ್ಲಿಯಲ್ಲಿಯೇ ಮಾಡಿಕೊಳ್ಳಬಹುದು. ನಾವಂತೂ ಮಲಗಲೇ ಇಲ್ಲ. ನಯ್ಯಾರ್ ಕೂಡಾ ಇನ್ನೂ ಎದ್ದಿದ್ದಾರೆ. ನೂರಾರು ಜನ ಫೋನ್ ಮಾಡ್ತಾಲೇ ಇದ್ದಾರೆ. ನೆಲ್ಸನ್ ಅಂಥ ವಿಷಕ್ರಿಮಿಯಾಗಿದ್ದ. ನನ್ನ ಕೈಯ್ಯಾರೆ ಅವನಿಗೆ ಅದೆಷ್ಟು ಡ್ರಿಂಕ್ಸ್ ಬಗ್ಗಿಸಿಕೊಟ್ಟಿದ್ದೀನೋ, ಎಷ್ಟು ಊಟ ಬಡಿಸಿದ್ದೀನೋ. ಸಿಂಧೂ ಮೆನನ್ನಳನ್ನ ಟ್ರ್ಯಾಪ್ ಮಾಡಲು ಟ್ರೈ ಮಾಡಿದ್ದ ಕಳ್ಳ. ದೇವರು ಅನ್ನುವವನು ಇದ್ದೇ ಇದಾನೆ. ಆದರೆ ಅದೇ ದೇವರು ನಮ್ಮ ಮಾಧವನ್ ಪಿಳ್ಳೈ ಹಾಗೂ ಅರುಂಧತಿ ಪಿಳ್ಳೈನೂ ಬಲಿ ತೆಗೆದುಕೊಂಡ. ಅದೇ ತುಂಬಾ ದುಃಖದ ಮತ್ತು ಬೇಸರದ ವಿಷಯ' ಎಂದು ತಾನೂ ಚಹಾವನ್ನು ಬಗ್ಗಿಸಿಕೊಂಡು ಕುಡಿದಿದ್ದ.

ಹದಿನೈದು ನಿಮಿಷಗಳಲ್ಲಿ ರೆಡಿಯಾಗಿದ್ದೆ. ಎರಡು ಬ್ಯಾಗುಗಳನ್ನೂ ಎರಡು ಕೈಗಳಲ್ಲಿ ಹಿಡಿದು ಕೊಠಡಿಯಿಂದ ಹೊರಡಲು ರೆಡಿಯಾಗಿದ್ದೆ. ಅಷ್ಟರಲ್ಲಿ ಭಗವಾನ್ ಕುಟ್ಟಿ ಮತ್ತು ವೆಳ್ಳಿಯಪ್ಪ ಇಬ್ಬರೂ ಬಂದಿದ್ದರು. ಬೇಡ ಬೇಡವೆಂದರೂ ಇಬ್ಬರೂ ಒಂದೊಂದು ಬ್ಯಾಗನ್ನು ತೆಗೆದುಕೊಂಡಿದ್ದರು. ಕೇರಳಕ್ಕೆ ಬಂದ ದಿನ ಏರ್‌ಪೋರ್ಟ್‌ನಲ್ಲಿ ನನ್ನ ಒಂದು ಬ್ಯಾಗನ್ನು ಅರುಂಧತಿ ಪಿಳ್ಳೈ ತಾನೇ ಕಾರಿನವರೆಗೂ ಹೊತ್ತು ತಂದಿದ್ದು ನೆನಪಾಗಿ ಅದೇ ಬ್ಯಾಗನ್ನು ವೆಳ್ಳಿಯಪ್ಪ ಈಗ ಹಿಡಿದುಕೊಂಡಿರುವುದನ್ನು ನೋಡಿ ನಾನದನ್ನು ಇಸಿದುಕೊಳ್ಳಲು ಹೋಗಿದ್ದೆ. 'ಬಿಡಿ ಸಾಹೇಬ್ರೆ ನಮ್ಮ ವೆಳ್ಳಿಯಪ್ಪ ಈಗಲೂ ಗಟ್ಟಿಮುಟ್ಟಾಗಿದ್ದಾನೆ' ಎಂದಿದ್ದ ಭಗವಾನ್ ಕುಟ್ಟಿ.

'ವೆಳ್ಳಿಯಪ್ಪ ಚೆನ್ನಾಗಿ ಬದುಕಿದವರು, ನನ್ನ ಬ್ಯಾಗನ್ನು ಹಿಡಿದರೆ ಸರಿಕಾಣುವುದಿಲ್ಲ' ಎಂದಿದ್ದೆ. ವೆಳ್ಳಿಯಪ್ಪ ಬ್ಯಾಗನ್ನು ನನ್ನ ಕೈಗೆ ನೀಡಿ ಡಲ್ಲಾಗಿ ನಿಂತಿದ್ದ. ಕೆ.ಎಮ್. ನಯ್ಯಾರ್ ತಮ್ಮ ಕೊಠಡಿಯಿಂದ ಹೊರ ಬಂದು ಶುಭ ಪ್ರಯಾಣ ಕೋರಿದ್ದರಲ್ಲದೆ 'ಭಗವಾನ್ ಕುಟ್ಟಿ ವಂಡರ್‌ಫುಲ್ ಡ್ರೈವರ್. ಎರ್ನಾಕುಲಂನಿಂದ ದಿಲ್ಲಿಯವರೆಗೆ ಬೇಕಾದ್ರೂ ಬ್ರೇಕ್ ತೆಗೆದುಕೊಳ್ಳದೆ ಡ್ರೈವ್ ಮಾಡ್ತಾನೆ' ಎಂದು ನಗುತ್ತಾ ನುಡಿದಿದ್ದರು.

ಇನ್ನೋವಾ ಕಾರಿನಲ್ಲಿ ಭಗವಾನ್ ಕುಟ್ಟಿ ಡ್ರೈವರ್ ಸೀಟಿನಲ್ಲಿ ಕುಳಿತರೆ ನಾನು ಆತನ ಪಕ್ಕದ ಸೀಟಿನಲ್ಲಿ ಕುಳಿತಿದ್ದೆ. ಒಂದು ಮೈಲಿ ಸಾಗಿರಬಹುದು, 'ನಮ್ಮ ಮಾಧವನ್ ಪಿಳ್ಳೈಗೆ ಆತ್ಮಗಳ ಅಸ್ತಿತ್ವದಲ್ಲಿ ಬಹಳ ನಂಬಿಕೆಯಿತ್ತು ಸಾಹೇಬ್ರೆ. ಆದರೆ ನನಗೆ ಆತ್ಮಗಳೆಂದರೆ ಅಂಥ ಭಯವೇನೂ ಇಲ್ಲ. ಹಾಗಾಗಿ ರಾತ್ರಿ ಎಲ್ಲಿಗೆ ಪ್ರಯಾಣಿಸಬೇಕಿದ್ದರೂ ಕಾರ್ ಡ್ರೈವಿಂಗ್ ಮಾಡಲು ನನ್ನನ್ನೇ ಕರೆದುಕೊಂಡು ಹೋಗುತ್ತಿದ್ದ ನಮ್ಮ ಮಾಧವನ್ ಪಿಳ್ಳೈ. ಎಂಥವರಾದರೂ ಒಬ್ಬರು ಜೊತೆಯಲ್ಲಿದ್ದರೆ ಯಾವ ಆತ್ಮವೂ ತಂಟೆಗೆ ಬರುವುದಿಲ್ಲವಂತೆ. ಅದನ್ನು ಮಾಧವನ್ ಪಿಳ್ಳೈ ಬಲವಾಗಿ ನಂಬಿದ್ದ ಮತ್ತು ಬೇರೆಯವರಿಗೆ ಹೇಳುತ್ತಲೂ ಇದ್ದ. ವರ್ಷದ ಹಿಂದೆ ಉಂಟಾದ ಪ್ರವಾಹದಲ್ಲಿ ಲೇಬರ್ ಕ್ವಾರ್ಟರ್ಸ್‌ಗಳಲ್ಲಿ ವಾಸವಾಗಿದ್ದ ಇಪ್ಪತ್ತೈದು ಮಂದಿ ಕಾರ್ಮಿಕರು ಪ್ರಾಣ ಕಳೆದುಕೊಂಡಿದ್ದರು. ಅವರ ಆತ್ಮಗಳು ತಮ್ಮ ತೋಟ ಮತ್ತು ಮನೆಯಲ್ಲಿ ಕಾಣದಂತೆ ಓಡಾಡುತ್ತಿವೆಯೆಂಬ ನಂಬಿಕೆ ಮತ್ತು ಭಯ ಮಾಧವನ್ ಪಿಳ್ಳೈಗೆ ಇತ್ತು. ಎತ್ತರದ ಜಾಗದಲ್ಲಿ ಮನೆಗಳನ್ನು ಕಟ್ಟಿಸಿಕೊಡುವಂತೆ ಕೆಲಸಗಾರರು ಮಾಧವನ್ ಕುಟ್ಟಿಯನ್ನು ಬಹಳ ಕಾಲದಿಂದಲೂ ಒತ್ತಾಯಿಸುತ್ತಿದ್ದರು. ಆದರೆ ಮಾಧವನ್ ಪಿಳ್ಳೈ ಗಮನ ಕೊಟ್ಟಿರಲಿಲ್ಲ. ಕಾರಣ ಕಾರ್ಮಿಕರ ಮನೆಗಳಲ್ಲಿ ಅಪಾರವಾದ ಕಪ್ಪು ಹಣ ಮತ್ತು ಬಂಗಾರವನ್ನು ಬಚ್ಚಿಡಲಾಗಿತ್ತು. ಹೋದ ವರ್ಷದ ಪ್ರವಾಹದಲ್ಲಿ ಕಾರ್ಮಿಕರ ಜೊತೆಗೆ ಹಣ, ಬಂಗಾರ ಎಲ್ಲವೂ ಕೊಚ್ಚಿಕೊಂಡು ಹೋಗಿತ್ತು. ಸರಿಯಾಗಿ ಒಂದು ವರ್ಷಕ್ಕೆ ಮಾಧವನ್ ಕುಟ್ಟಿಯೂ ಅಂಥದ್ದೇ ಪ್ರವಾಹದಲ್ಲಿ ಹೋಗಿಬಿಟ್ಟ. ಇದು ಕಾರ್ಮಿಕರ ಅತೃಪ್ತ ಪ್ರೇತಾತ್ಮಗಳ ಕೆಲಸವಿರಬಹುದೆ ಎಂಬ ಗುಮಾನಿ ಕಾಡುತ್ತಿದೆ ನನ್ನನ್ನು' ಎಂದು ಮಾತು ನಿಲ್ಲಿಸಿ ಭಗವಾನ್ ಕುಟ್ಟಿ ಕ್ಷಣ ನನ್ನ ಕಡೆ ನೋಡಿದ್ದ.

'ಆತ್ಮಗಳ ಬಗ್ಗೆ ನನಗೂ ನಿಖರವಾಗಿ ಏನೂ ಗೊತ್ತಿಲ್ಲ. ದೇಹಗಳಿಲ್ಲದೆ ಆತ್ಮಗಳು ಇರಬಲ್ಲವೆ ಎಂಬುದೊಂದು ದೊಡ್ಡ ಪ್ರಶ್ನೆ. ನನಗೆ ಆ ಬಗ್ಗೆ ನಂಬಿಕೆಯೂ ಇಲ್ಲ, ಅನುಭವವೂ ಆಗಿಲ್ಲ' ನಾನು ನಗುತ್ತಾ ಹೇಳಿದ್ದೆ. 'ನೀವು ಬಂದ ದಿನ ಗೆಸ್ಟ್ ಹೌಸ್‌ನಲ್ಲಿ ನೀವೊಬ್ಬರೇ ಮಲಗುವುದರ ಬಗ್ಗೆ ಭಯಗೊಂಡು ನಿಮ್ಮೊಂದಿಗೆ ಯಾರನ್ನಾದರೂ ಮಲಗಿಸಬೇಕೆಂದು ಯೋಚಿಸುವಾಗ ಅರುಂಧತಿ ಪಿಳ್ಳೈ ತಾನೇ ಸ್ವ ಇಚ್ಛೆಯಿಂದ ನಿಮ್ಮ ಜೊತೆ ಮಲಗಲು ಬಂದಿದ್ದಳು. ಸಂಬಂಧಗಳಿಲ್ಲದ ಅಪರಿಚಿತ ವಿರುದ್ಧ ಲಿಂಗಿ ದೇಹಗಳು ಒಂದರ ಪಕ್ಕ ಒಂದು ಮಲಗಿದರೆ ಏನು ಘಟಿಸಬಹುದು ಎಂಬುದನ್ನು ನಾನು ಬಲ್ಲೆ. ಯಾವುದಾದರೂ ಒಂದು ದೇಹ ಇನ್ನೊಂದು ದೇಹವನ್ನು ಸೇರಲು ಖಂಡಿತವಾಗಿಯೂ ಪ್ರೇರೇಪಿಸುತ್ತದೆ.

ಅಂದು ನೀವೂ ಮತ್ತು ಅರುಂಧತಿ ಪಿಳ್ಳೈ ದೈಹಿಕವಾಗಿ ಸೇರಿರುವುದು ಖಂಡಿತವಾಗಿಯೂ ಸತ್ಯವೆಂದು ನನಗೆ ಗೊತ್ತಿತ್ತು. ನಾನು ಸಿಂಧೂ ಮೆನನ್ನಳನ್ನ ಕಳುಹಿಸೋಣವೆಂದರೂ ಮಾಧವನ್ ಪಿಳ್ಳೈ ಒಪ್ಪದೆ ಅರುಂಧತಿಯನ್ನೇ ಕಳುಹಿಸಿದ್ದರು. ಮಾಧವನ್ ಪಿಳ್ಳೈ ಮತ್ತು ಸಿಂಧೂ ಮೆನನ್ನಳ ನಡುವೆ ದೈಹಿಕ ಸಂಬಂಧವಿರುವುದು ನನಗೆ ಗೊತ್ತು. ಮಾಧವನ್ ಪಿಳ್ಳೈ ಹೆಂಡತಿ ಸ್ವತಃ ನನ್ನ ಒಡಹುಟ್ಟಿದವಳು. ಆದರೆ ಅವಳಿಂದ ಸರಿಯಾದ ದೈಹಿಕ ಸುಖ ಮಾಧವನ್ ಪಿಳ್ಳೈಗೆ ಯಾವೊತ್ತೂ ಸಿಗಲಿಲ್ಲ. ನಿಜ ಹೇಳಬೇಕೆಂದರೆ ಸಿಂಧೂ ಮೆನನ್ ಮತ್ತು ನಾನು ಹೆಸರಿಗಷ್ಟೇ ಗಂಡ ಹೆಂಡತಿಯರು. ಆದರೆ ನಾವೆಂದೂ ದೈಹಿಕವಾಗಿ ಒಬ್ಬರನ್ನೊಬ್ಬರು ಸೇರಿದವರೇ ಅಲ್ಲ' ಎಂದು ಭಗವಾನ್ ಕುಟ್ಟಿ ಮಾತನಾಡುವುದನ್ನು ನಿಲ್ಲಿಸಿದವನು ಕಾರನ್ನು ಪಕ್ಕಕ್ಕೆ ನಿಲ್ಲಿಸಿ ಕೆಳಗಿಳಿದು ಹೋಗಿ ಮೂತ್ರ ವಿಸರ್ಜನೆ ಮಾಡುತ್ತಿದ್ದ. ನನಗೆ ಕ್ಷಣ ಯಾಕೋ ನನ್ನ ದೇಹದಲ್ಲಿ ಭಯ ತುಂಬಿಕೊಂಡಂತೆ ಅನುಭವವಾಗಿತ್ತು.

(ಸಶೇಷ)